

بِسْمِ اللّٰہِ الرَّحْمٰنِ الرَّحِیْم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 15-11-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್* ಒಬ್ಬ ಅತ್ಯಂತ ನಿಷ್ಠಾವಂತ ಬದರಿ ಸಹಾಬಿ ಹಝ್ರತ್ ಅಬ್ದುಲ್ಲಾ(ರ)ರವರ ಪಿತನಾದ ಅಬ್ದುಲ್ಲಾ ಬಿನ್ ಉಬಯ್ ಬಿನ್ ಸುಲೂಲರ ಬಗ್ಗೆ ಹೀಗೆ ಹೇಳಿದರು:

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಿಂದ ಹೊರಗೆ ಹೋಗಿ ಶತ್ರುಗಳ ವಿರುದ್ಧ ಯುದ್ಧ ಮಾಡಲು ನಿರ್ಧರಿಸಿದಾಗ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸುಲೂಲ್ ಸಹ ಅವರೊಂದಿಗೆ ಯುದ್ಧಕ್ಕೆ ಹೊರಟರು. ಆದರೆ ಉಹುದ್ ಪರ್ವತದ ಸಮೀಪಕ್ಕೆ ತಲಪಿದಾಗ ಆತ ತನ್ನ ಮುನ್ನೂರು ಸಂಗಡಿಗರನ್ನು ಕರೆದುಕೊಂಡು ವಿದ್ರೋಹಿಯಾಗಿ ಮದೀನಕ್ಕೆ ಮರಳಿದನು. ಆತ ಹೀಗೆ ಹೇಳಿದನು: "ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನ ಮಾತನ್ನು ಅಂಗೀಕರಿಸಲಿಲ್ಲ. ಮದೀನದಲ್ಲಿಯೇ ನಿಂತುಕೊಂಡು ಶತ್ರುವನ್ನು ಪ್ರತಿರೋಧಿಸಬೇಕೆಂದು ನಾವು ಹೇಳಿದ ಮಾತನ್ನು ಒಪ್ಪಲಿಲ್ಲ. ಇದು ಯುದ್ಧವೇನೂ ಅಲ್ಲ. ಇದು ತಮ್ಮನ್ನು ನಾಶಕ್ಕೆ ಹಾಕುವ ವಿಷಯವಾಗಿದೆ. ನಾನು ಈ ನಾಶಕ್ಕೆ ನನ್ನನ್ನು ಹಾಕಲು ಇಚ್ಛಿಸುವುದಿಲ್ಲ." ಅವನಲ್ಲಿ ಕಪಟ ವಿಶ್ವಾಸ ಮೊದಲಿನಿಂದಲೇ ಇತ್ತು. ಕಪಟವಿಶ್ವಾಸಿ (ಮುನಾಫಿಖ್) ಹೇಡಿಯಾಗಿರುತ್ತಾನೆ. ಅವನ ಈ ಹೇಡಿತನ ಅಲ್ಲಿಗೆ ಹೋದಾಗ ಬಹಿರಂಗಗೊಂಡಿತು.

ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸುಲೂಲ್ ಯಾವ ಯಾವ ರೀತಿಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಮುಸ್ಲಿಮರ ಬಗ್ಗೆ ನೋವನ್ನು ಉಂಟುಮಾಡುವ ಪರಿಹಾಸಕರ ಮಾತುಗಳನ್ನಾಡಲು ಪ್ರಾರಂಭಿಸಿದ್ದನು ಎಂಬುದರ ಬಗ್ಗೆ ಈಗ ನಾನು ಸ್ವಲ್ಪ ವಿವರಣೆ ನೀಡುವೆನು. ಅವುಗಳಿಂದ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸುಲೂಲನ ಪುತ್ರನಾದ ಹಝ್ರತ್ ಅಬ್ದುಲ್ಲಾರವರಿಗೆ ಇಸ್ಲಾಮ್ ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಇದ್ದ ಪ್ರೀತಿ ಸಹ ಬಹಿರಂಗಗೊಳ್ಳುತ್ತದೆ. ಹಿಜರಿ ವರ್ಷ 5ರಲ್ಲಿ ಬನೂ ಮುಸ್ತಲಿಖ್ ಯುದ್ಧದಿಂದ ಮರಳಿ ಬರುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮುರೀಸೀಅ್‌ನಲ್ಲಿ ಕೆಲವು ದಿನ ತಂಗಿದರು. ಇದು ಬನೂ ಮುಸ್ತಲಿಖ್‌ಗೆ ಸೇರಿದ ನೀರಿನ ಒಂದು ಒರತೆಯ ಹೆಸರಾಗಿದೆ. ಅಲ್ಲಿ ಒಂದು ಘಟನೆ ಸಂಭವಿಸಿತು. ಹಝ್ರತ್ ಉಮರ್(ರ)ರವರ ಸೇವಕ ಜಾಜಾ ಎಂಬ ಹೆಸರಿನವನು ಒರತೆಯಿಂದ ನೀರನ್ನು ತೆಗೆದುಕೊಳ್ಳಲು ಹೋದನು. ಅದೇ ಸಮಯ ಸಿನಾನ್ ಎಂಬ ಅನ್‌ಸಾರ್‌ಗಳೊಂದಿಗೆ ಪ್ರತಿಜ್ಞಾ ಬದ್ಧನಾದ ವ್ಯಕ್ತಿ ನೀರಿಗಾಗಿ ಅಲ್ಲಿಗೆ ತಲಪಿದನು. ಅವರಿಬ್ಬರೂ ಅಜ್ಞಾನಿಗಳಾಗಿದ್ದು ಮುಗ್ಧ ಜನರಾಗಿದ್ದರು. ಅವರಿಬ್ಬರೂ ಅಲ್ಲಿ ಜಗಳ ಮಾಡಿದರು. ಸಿನಾನ್ ಉಚ್ಚ ಧ್ವನಿಯಿಂದ ಬೊಬ್ಬೆ ಹಾಕಲು ಪ್ರಾರಂಭಿಸಿದನು. ಅನ್‌ಸಾರ್‌ಗಳೇ, ನನ್ನ ಸಹಾಯಕ್ಕೆ ಬನ್ನಿರಿ. ನನ್ನ ಮೇಲೆ ಆಕ್ರಮಣ ನಡೆದಿದೆ. ಆಗ ಜಾಜಾ ಸಹ ತನ್ನವರನ್ನು ಕರೆಯಲು ಪ್ರಾರಂಭಿಸಿದನು. ಓ ಮುಹಾಜಿರ್‌ಗಳೇ ಓಡಿ ಬನ್ನಿರಿ ಎಂದನು. ಅನ್‌ಸಾರ್ ಮತ್ತು ಮುಹಾಜಿರ್‌ಗಳು ತಮ್ಮ ಖಡ್ಗಗಳೊಂದಿಗೆ ಅಲ್ಲಿಗೆ ಓಡಿ ಬಂದರು. ಆಗ ರಕ್ತಪಾತವಾಗುವ ಭಯವಿತ್ತು. ಆದರೆ ಕೆಲವು ಬುದ್ಧಿಶಾಲಿಗಳಾದ ನಿಷ್ಠಾವಂತ ಮುಹಾಜಿರ್‌ಗಳು ಮತ್ತು ಅನ್‌ಸಾರ್‌ಗಳು ತಕ್ಷಣ ಜಗಳ ಮಾಡುವವರನ್ನು ಬೇರ್ಪಡಿಸಿದರು ಮತ್ತು ರಾಜಿ ಮಾಡಿಸಿದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರ ಬಗ್ಗೆ ಸಮಾಚಾರ ತಲಪಿದಾಗ 'ಇದು ಅಜ್ಞಾನದ ಒಂದು ಪ್ರಕಟನೆಯಾಗಿದೆ' ಎಂದು ಹೇಳಿದರು. ಅವರು ತನ್ನ ಅತೃಪ್ತಿಯನ್ನು ಪ್ರಕಟಿಸಿದರು. ಅಂತೂ ಆ ವಿಷಯ ಅಲ್ಲಿಗೆ ಮುಕ್ತಾಯವಾಯಿತು. ಆದರೆ ಅಬ್ದುಲ್ಲಾ ಬಿನ್ ಉಬಯ್ಯ್‌ಗೆ ಈ ಘಟನೆಯ ಬಗ್ಗೆ ತಿಳಿಯಿತು. ಅವನು ಆ ಯುದ್ಧದಲ್ಲಿ ಭಾಗವಹಿಸಿದ್ದನು. ಅವನು ಈ ಕಲಹವನ್ನು ಪುನಃ ಉತ್ತೇಜಿಸಲು ಪ್ರಯತ್ನಿಸಿದನು. ಅವನು ತನ್ನ ಸಂಗಡಿಗರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮತ್ತು ಮುಸ್ಲಿಮರ ವಿರುದ್ಧ ಬಹಳ ಉದ್ರೇಕಿಸಿದನು. ಅವನು ಹೇಳಿದನು: ಇವುಗಳೆಲ್ಲಾ ನಿಮ್ಮ ತಪ್ಪುಗಳಿಂದಲೇ ಸಂಭವಿಸಿದವುಗಳಾಗಿವೆ. ನೀವು ಅವರನ್ನು ನಿಮ್ಮ ತಲೆ ಮೇಲೆ ಏರಿಸಿರುವಿರಿ. ನೀವು ಅವರಿಗೆ ಸಹಾಯ ಮಾಡುವುದನ್ನು ಬಿಟ್ಟುಬಿಡಬೇಕು. ಆ ದುಷ್ಟನು ಹೀಗೆ ಸಹ ಹೇಳಿದನು: لَئِنْ رَّجَعْنَا إِلَى الْمَدِيْنَةِ لَيُخْرِجَنَّ الْأَعَزُّ مِنْهَا الْأَذَلَّ – **ಲ ಇನ್ ರಜಅ್‌ನಾ ಇಲಲ್ ಮದೀನತಿ ಲ ಯುಖ್‌ರಿಜನ್ನಲ್ ಅಅಝ್ಝು ಮಿನ್‌ಹಲ್ ಅಝಲ್ಲ.** ನಾವು ಮದೀನಕ್ಕೆ ತಲಪೋಣ ಅನಂತರ ಅತ್ಯಂತ ಗೌರವಾರ್ಹ ವ್ಯಕ್ತಿ ಅತ್ಯಂತ ಹೀನ ವ್ಯಕ್ತಿಯನ್ನು ನಗರದಿಂದ ಹೊರ ಹಾಕುವನು.

ಅವನು ಈ ಮಾತುಗಳನ್ನು ಹೇಳುವಾಗ ಒಬ್ಬ ಮುಸ್ಲಿಮ್ ಬಾಲಕ ಝೈದ್ ಬಿನ್ ಅರ್‌ಖಮ್ ಅಲ್ಲಿ ಕುಳಿತಿದ್ದನು. ಅವನು ಆ ಮಾತುಗಳನ್ನು ಆಲಿಸಿ ಆತಂಕಗೊಂಡು ತನ್ನ ಚಿಕ್ಕಪ್ಪನ ಮೂಲಕ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ವಿವರ ತಿಳಿಸಿದನು. ಆಗ ಅಲ್ಲಿ ಪ್ರವಾದಿಯವರ ಜೊತೆ ಹಝ್ರತ್ ಉಮರ್(ರ) ಕುಳಿತಿದ್ದರು. ಆ ಶಬ್ದಗಳನ್ನು ಆಲಿಸಿದಾಗ ಅವರು ಸಿಟ್ಟಿನಿಂದಲೂ ಅಭಿಮಾನದಿಂದಲೂ ತುಂಬಿದವರಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ಅಲ್ಲಾಹನ ಸಂದೇಶವಾಹಕರೇ ಆ ಕಲಹಗಾರ ಕಪಟವಿಶ್ವಾಸಿಯ ಕೊರಳು ಕತ್ತರಿಸಿ ಹಾಕಲು ನನಗೆ ಅನುಮತಿ ನೀಡಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ

ವಸಲ್ಲಮ್ ಹೇಳಿದರು: ಉಮರ್, ಬಿಟ್ಟುಬಿಡಿರಿ. ಮುಹಮ್ಮದ್ ತನ್ನ ಸಂಗಡಿಗರನ್ನು ಕೊಲ್ಲಿಸುತ್ತಾನೆ ಎಂದು ಜನರು ಚರ್ಚೆ ಮಾಡುವುದನ್ನು ನೀವು ಇಷ್ಟಪಡುವಿರೇನು? ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬ್ದುಲ್ಲಾ ಬಿನ್ ಉಬಯ್ ಮತ್ತು ಅವನ ಸಂಗಡಿಗರನ್ನು ಕರೆದು ಆ ವಿಷಯದ ಬಗ್ಗೆ ಕೇಳಿದಾಗ ಅವರೆಲ್ಲರೂ ಆಣೆ ಹಾಕಿ ಹೇಳಿದರು: ನಾವು ಅಂತಹ ಮಾತು ಹೇಳಿಯೇ ಇಲ್ಲ ಎಂದು.

ಸ್ವಲ್ಪ ಸಮಯ ಕಳೆದಾಗ ಅಬ್ದುಲ್ಲಾ ಬಿನ್ ಉಬಯ್‌ನ ಪುತ್ರ ಹಝ್ರತ್ ಅಬ್ದುಲ್ಲಾ(ರ) ಗಾಬರಿಗೊಂಡು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದರು. ಅವರು ನಿಷ್ಠಾವಂತ ಸಹಾಬಿಯಾಗಿದ್ದರು. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ತಾವು ನನ್ನ ತಂದೆಯ ಧಿಕ್ಕಾರ ಭಾವ ಮತ್ತು ಕಲಹಗಾರಿಕೆ ಕಾರಣ ಅವರನ್ನು ಹತ್ಯೆ ಮಾಡಲು ಇಚ್ಛಿಸುತ್ತೀರೆಂಬ ಸಮಾಚಾರವನ್ನು ನಾನು ಆಲಿಸಿದೆ. ನೀವು ಹಾಗೆ ತೀರ್ಮಾನ ಮಾಡಿದ್ದರೆ ನನಗೆ ಅನುಮತಿ ನೀಡಿರಿ. ಈಗಲೇ ನಾನು ನನ್ನ ತಂದೆಯ ತಲೆ ಕಡಿದು ತಮ್ಮ ಪಾದಗಳಲ್ಲಿ ಹಾಕುವೆನು. ನೀವು ಬೇರೆ ಯಾರಿಗೂ ಹಾಗೆ ಮಾಡಲು ಆಜ್ಞೆ ನೀಡಬೇಡಿರಿ. ಏಕೆಂದರೆ ಹಾಗೆ ಮಾಡಿದರೆ ಅಜ್ಞಾನ ಕಾಲದ ಯಾವುದಾದರೂ ರಕ್ತನಾಳ ಮುಂದೊಂದು ದಿನ ನನ್ನ ದೇಹದಲ್ಲಿ ಉತ್ತೇಜಿಸುವಾಗ ನಾನು ನನ್ನ ತಂದೆಯ ಹಂತಕನಿಗೆ ಏನಾದರೂ ಹಾನಿ ಉಂಟುಮಾಡಬಹುದು. ಹಾಗೆ ಮಾಡಿದರೆ ನಾನು ಅಲ್ಲಾಹನ ಸಂತೃಪ್ತಿ ಆಶಿಸುತ್ತಿದ್ದು ಕೂಡ ನರಕಕ್ಕೆ ಬೀಳುವೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರನ್ನು ಸಮಾಧಾನ ಪಡಿಸಿ ಹೇಳಿದರು: ಖಂಡಿತವಾಗಿಯೂ ನಾವು ಹಾಗೆ ನಿರ್ಧರಿಸಿಲ್ಲ. ನಾನು ನಿಮ್ಮ ಪಿತನೊಂದಿಗೆ ಮೃದುವಾಗಿಯೂ ಔದಾರ್ಯದಿಂದಲೂ ವರ್ತಿಸುವೆನು.

ಆದರೆ ಹಝ್ರತ್ ಅಬ್ದುಲ್ಲಾರಿಗೆ ತನ್ನ ತಂದೆಯ ವಿರುದ್ಧ ಎಂತಹ ಆವೇಶವಿತ್ತೆಂದರೆ ಇಸ್ಲಾಮೀ ಸೈನ್ಯ ಮದೀನದ ಕಡೆಗೆ ಮರಳುವಾಗ ಹಝ್ರತ್ ಅಬ್ದುಲ್ಲಾ ತನ್ನ ತಂದೆಯನ್ನು ತಡೆದು ನಿಲ್ಲಿಸಿ ಹೇಳಿದರು: ಅಲ್ಲಾಹನಾಣೆ ನೀವು ನಿಮ್ಮ ಬಾಯಿಯಿಂದ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗೌರವಾರ್ಹರೆಂದೂ ನೀವು ನೀಚ ವ್ಯಕ್ತಿ ಎಂದೂ ಹೇಳುವ ತನಕ ನಿಮ್ಮನ್ನು ಮುಂದೆ ಸಾಗಲು ಬಿಡಲಾರೆ. ಹಝ್ರತ್ ಅಬ್ದುಲ್ಲಾ ಎಷ್ಟು ಒತ್ತಾಯ ಪೂರ್ವಕವಾಗಿ ಆವೇಶಭರಿತರಾಗಿ ಈ ಮಾತುಗಳನ್ನು ತನ್ನ ತಂದೆಯೊಂದಿಗೆ ಹೇಳಿದರೆಂದರೆ ಕೊನೆಗೆ ಆತನು ತನ್ನ ಪುತ್ರ ಹೇಳಿದ ಶಬ್ದಗಳನ್ನು ಪುನರಾವರ್ತಿಸಿದನು. ಆಗ ಹಝ್ರತ್ ಅಬ್ದುಲ್ಲಾ ಅವನಿಗೆ ಮುಂದೆ ಸಾಗಲು ಬಿಟ್ಟರು.

ನಂತರ, ಕಪಟ ವಿಶ್ವಾಸಿಗಳು ಒಂದು ಅತ್ಯಂತ ಕೊಳಕು ಸುಳ್ಳು ಆರೋಪವನ್ನು ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾರ ವಿರುದ್ಧ ಮಾಡಿದ್ದರು. ಆ ಸುಳ್ಳನ್ನು ಸೃಷ್ಟಿಸಿದವನು ಸಹ ಅಬ್ದುಲ್ಲಾ ಬಿನ್ ಉಬಯ್ಯ್ ಆಗಿದ್ದನು. ಇದು ಸಹ ಬನೂ ಮುಸ್ತಲಿಖ್ ಯುದ್ಧದಿಂದ ಮರಳಿ ಬರುತ್ತಿದ್ದ ಕಾಲದ್ದಾಗಿದೆ. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ನಾನು ಒಂದು ದಿವಸ ಉಮ್ಮು ಮುಸ್‌ತಹ್ ಜೊತೆಗೆ ಬಹಿರ್ದೆಸೆಗೆ ಹೋದಾಗ ಆಕೆ ನನ್ನೊಂದಿಗೆ ನನ್ನ ಮೇಲೆ ಸುಳ್ಳು ಆರೋಪ ಹೊರಿಸಿದ ವಿಷಯ ಹೇಳಿದರು. ನಾನು ಮನೆಗೆ ಮರಳಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನ ಬಳಿಗೆ ಬಂದು ಅಸ್ಸಲಾಮು ಅಲೈಕುಮ್ ಹೇಳಿದರು. ನೀನು ಹೇಗಿರುವೆ? ಎಂದು ಕೇಳಿದರು. ನಾನು ಹೇಳಿದೆ: ನನ್ನನ್ನು ನನ್ನ ತಂದೆ ತಾಯಂದಿರ ಬಳಿಗೆ ಹೋಗಲು ನನಗೆ ಅನುಮತಿ ನೀಡಿರಿ. ಅವರು ಅನುಮತಿ ನೀಡಿದರು. ನಾನು ನನ್ನ ತವರು ಮನೆಗೆ ಹೋದಾಗ ನನ್ನ ತಾಯಿಯೊಂದಿಗೆ ಕೇಳಿದೆ: ಜನರು ಏನು ಹೇಳುತ್ತಿದ್ದಾರೆ ಎಂದು. ಅವರು ಹೇಳಿದರು: ನೀನು ಆ ಮಾತಿನ ಬಗ್ಗೆ ಕೊರಗಬೇಡ. ನೀನು ಸಮಾಧಾನದಿಂದಿರು. ಜನರು ಇಂತಹ ಮಾತುಗಳನ್ನು ಹೇಳುತ್ತಾ ಇರುತ್ತಾರೆ ಎಂದು ಹೇಳಿದರು. ನಾನು ಹೇಳಿದೆ, ಸುಬ್‌ಹಾನಲ್ಲಾಹ್ ಜನರು ಇಂತಹ ಮಾತುಗಳನ್ನು ಹೇಳುತ್ತಿರುವರೇ? ಆ ರಾತ್ರಿ ಇಡೀ ನಾನು ಅಳುತ್ತಾ ಇದ್ದೆ. ನಾನು ನಿದ್ರಿಸಲಿಲ್ಲ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೆಲವು ಸಹಾಬರೊಂದಿಗೆ ಸಮಾಲೋಚನೆ ನಡೆಸಿದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಸೇವಕಿ ಬರೀರಳನ್ನು ಒಂದು ದಿನ ಕರೆಯಿಸಿ ಕೇಳಿದರು, ಬರೀರ, ನಿನಗೆ ಸಂಶಯದೋರುವಂತಹ ಏನನ್ನಾದರೂ ಆಯಿಶಳಲ್ಲಿ ನೀನು ನೋಡಿದ್ದಿಯೋ? ಬರೀರ ಹೇಳಿದಳು: ಖಂಡಿತವಾಗಿಯೂ ಏನನ್ನೂ ಕಂಡಿಲ್ಲ. ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ. ನಾನು ಆಯಿಶರಲ್ಲಿ ಯಾವುದೇ ನ್ಯೂನತೆ ಪ್ರಕಟಿಸುವುದನ್ನು ಕಂಡಿಲ್ಲ. ಆ ಮಾತನ್ನು ಆಲಿಸಿದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹಾಬರೊಂದಿಗೆ ಹೇಳಿದರು: ನನ್ನ ಪತ್ನಿಗೆ ಸಂಬಂಧಿಸಿ ನನಗೆ ದುಃಖ ನೀಡಿದವನನ್ನು ಸುಧಾರಣೆ ಮಾಡುವವರು ಯಾರಿದ್ದಾರೆ. ಅಲ್ಲಾಹನಾಣೆ ನಾನು ನನ್ನ ಪತ್ನಿಯಲ್ಲಿ ಒಳಿತಿನ ಹೊರತು ಬೇರೇನೂ ಕಂಡಿಲ್ಲ. ಹಝ್ರತ್ ಆಯಿಶ(ರ) ಹೇಳುತ್ತಾರೆ: ಒಂದು ದಿನ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಈ ವಿಷಯದ ಬಗ್ಗೆ ನನ್ನೊಡನೆ ಕೇಳಿದಾಗ ನಾನು ಹೇಳಿದೆ: ಅಲ್ಲಾಹನಾಣೆ, ಜನರು ಚರ್ಚೆ ಮಾಡುವ ವಿಷಯ ನೀವು ಆಲಿಸಿರುವಿರಿ. ನಾನು ಅಂತಹ ಯಾವುದೇ ಕೆಲಸ ಮಾಡಿಲ್ಲ ಮತ್ತು ನಾನು ವಾಸ್ತವಿಕವಾಗಿ ನಿರಪರಾಧಿ ಎಂದು ಅಲ್ಲಾಹನಿಗೆ ತಿಳಿದಿದೆ. ನಾನು ಹೇಳಿದ ಮಾತನ್ನು ನೀವು ಸತ್ಯವೆಂದು ಭಾವಿಸದಿದ್ದರೂ ಅಲ್ಲಾಹನಿಗೆ ತಿಳಿದಿದೆ ನಾನು ಅಂತಹ ಯಾವ ಕೆಲಸವನ್ನೂ ಮಾಡಿಲ್ಲ ಎಂದು. ಅಲ್ಲಾಹನಾಣೆ ನಾನು ನನ್ನ ಬಗ್ಗೆ ಯೂಸುಫ್ ಅಲೈಹಿಸ್ಸಲಾಮರ ಪಿತನ ಹಾಗಿರುವ ಉದಾಹರಣೆಯನ್ನು ಕಾಣುತ್ತೇನೆ. ಅವರು ಹೇಳಿದರು: فَصَبۡرٌ جَمِيلٌ ۖ وَاللَّهُ الْمُسْتَعَانُ عَلَىٰ مَا تَصِفُونَ – **ಫಸಬ್‌ರುನ್ ಜಮೀಲ್, ವಲ್ಲಾಹುಲ್ ಮುಸ್ತಆನು ಅಲಾ ಮಾತಸಿಫೂನ್.** ಸಹನೆ ದೋರುವುದೇ ನನಗೆ ಒಳ್ಳೆಯದಾಗಿದೆ. ನೀವು ಹೇಳುವ ಮಾತುಗಳ ಬಗ್ಗೆ ಸಹಾಯವನ್ನು ಅಲ್ಲಾಹುವಿನಿಂದ ಮಾತ್ರ ಬೇಡಬೇಕಾಗಿದೆ.

ಹಝ್ರತ್ ಆಯಿಶ(ರ) ಹೇಳುತ್ತಾರೆ: ಅನಂತರ ನಾನು ನನ್ನ ಹಾಸಿಗೆ ಬಳಿಗೆ ಬಂದೆನು. ಅಲ್ಲಾಹನು ನನ್ನನ್ನು ನಿರ್ದೋಷಿ ಎಂದು ಪ್ರಕಟಿಸುವನೆಂದೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನನ್ನ ನಿಷ್ಕಳಂಕತೆ ಬಗ್ಗೆ ತಿಳಿಸುವನೆಂದೂ ನಾನು ಭರವಸೆ ಹೊಂದಿದ್ದೆನು. ಹಝ್ರತ್ ಆಯಿಶ(ರ)

ಹೇಳುತ್ತಾರೆ: ಅಲ್ಲಾಹನಾಣೆ! ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾನು ಕುಳಿತಿದ್ದ ಸ್ಥಳದಿಂದ ಎದ್ದೇಳುವ ಮೊದಲೇ ಅವರಿಗೆ ಅಲ್ಲಾಹನ ಸಂದೇಶವಾಣಿ ಲಭಿಸಿತು. ಸಂದೇಶವಾಣಿ ಲಭಿಸುವ ಸ್ಥಿತಿ ಕೊನೆಗೊಂಡಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮುಗುಳು ನಗುತ್ತಿದ್ದರು. ಅವರು ಹೇಳಿದರು: "ಆಯಿಶ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸು. ಏಕೆಂದರೆ ಅಲ್ಲಾಹನು ನೀನು ನಿರ್ದೋಷಿ ಎಂದು ಪ್ರಕಟಿಸಿದ್ದಾನೆ." ಆಗ ನನ್ನ ತಾಯಿ ಹೇಳಿದರು: ನೀನು ಎದ್ದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋಗು. ಅವರಿಗೆ ಕೃತಜ್ಞತೆ ಅರ್ಪಿಸು. ನಾನು ಹೇಳಿದೆ: ಅಲ್ಲಾಹನಾಣೆ ಖಂಡಿತ ಹೋಗಲಾರೆ. ನಾನು ಅವರಿಗೆ ಕೃತಜ್ಞತೆ ಅರ್ಪಿಸಲಾರೆನು. ನಾನು ಅವರ ಬಳಿಗೆ ಹೋಗಲಾರೆನು. ಅಲ್ಲಾಹನಿಗೆ ಹೊರತು ಬೇರೆ ಯಾರಿಗೂ ನಾನು ಕೃತಜ್ಞತೆ ಅರ್ಪಿಸಲಾರೆನು.

ಈ ಕಪಟ ವಿಶ್ವಾಸಿಗಳ ನಾಯಕನು ಹಝ್ರತ್ ಆಯಿಶ(ರ)ರ ವಿರುದ್ಧ ಅಂತಹ ಅಪವಾದ ಹೊರಿಸಿದ್ದರೂ ಅವನೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಗೆ ವರ್ತಿಸಿದರು ಎಂಬುದರ ಬಗ್ಗೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೇಳುತ್ತಾರೆ: ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸುಲೂಲ್ ಮೃತನಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ತಾವು ಅವರ ಜನಾಝ ನಮಾಝ್ ನಿರ್ವಹಿಸಿರಿ ಎಂದು ಅಪೇಕ್ಷಿಸಲಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವನ ಜನಾಝ ನಮಾಝ್ ನಿರ್ವಹಿಸಲು ನಿಂತಾಗ ನಾನು ಅವರ ಬಳಿಗೆ ತಕ್ಷಣ ಹೋಗಿ ಹೇಳಿದೆ: ಅಲ್ಲಾಹನ ಸಂದೇಶವಾಹಕರೇ, ತಾವು ಅಬ್ದುಲ್ಲಾನ ಜನಾಝ ನಮಾಝ್ ನಿರ್ವಹಿಸುವಿರೇನು? ಅವನು ಒಂದು ದಿನ ಹೀಗೆ ಹೇಳಿದ್ದ ಮತ್ತೊಂದು ದಿನ ಹಾಗೆ ಹೇಳಿದ್ದ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಗುಳು ನಗುತ್ತಾ ನನ್ನೊಡನೆ ದೂರ ಸರಿಯಲು ಹೇಳಿದರು. ನಾನು ಬಹಳ ಒತ್ತಾಯಿಸಿದಾಗ ಅವರು ಹೇಳಿದರು: ನನಗೆ ಅಧಿಕಾರ ನೀಡಲಾಗಿದೆ. ಆ ಅಧಿಕಾರ ನಾನು ವಹಿಸಿಕೊಂಡಿದ್ದೇನೆ. ನಾನು ಅವನಿಗೋಸ್ಕರ ಎಪ್ಪತ್ತು ಸಾರಿಗಿಂತ ಹೆಚ್ಚು ಸಾರಿ ಕ್ಷಮೆಯನ್ನು ಯಾಚಿಸಿದರೆ ಅವನು ಕ್ಷಮಿಸಲ್ಪಡುವನಾದರೆ ನಾನು ಖಂಡಿತವಾಗಿ ಅವನಿಗೋಸ್ಕರ ಎಪ್ಪತ್ತಕ್ಕಿಂತ ಹೆಚ್ಚು ಸಾರಿ ಕ್ಷಮೆಯನ್ನು ಯಾಚಿಸುವೆನು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವನ ಜನಾಝ ನಮಾಝ್ ನಿರ್ವಹಿಸಿದರು. ಅವರು ಅಲ್ಲಿಂದ ಮರಳಿ ಹೋದಾಗ ಸ್ವಲ್ಪ ಹೊತ್ತಿನೊಳಗೆ ಸೂರಃ ತೌಬದ ಈ ವಚನಗಳು ಅವತೀರ್ಣಗೊಂಡವು:

وَلَا تُصَلِّ عَلَىٰٓ أَحَدٍ مِّنْهُم مَّاتَ أَبَدًا وَلَا تَقُمْ عَلَىٰ قَبْرِهِۦٓ ۖ إِنَّهُمْ كَفَرُوا بِٱللَّهِ

وَرَسُولِهِۦ وَمَاتُوا وَهُمْ فَـٰسِقُونَ - **ವಲಾ ತುಸಲ್ಲಿ ಅಲಾ ಅಹದಿನ್ ಮಿನ್‌ಹುಮ್ ಮಾತ ಅಬದನ್, ವಲಾ ತಖುಮ್ ಅಲಾ ಖಬ್‌ರಿಹೀ, ಇನ್ನಹುಮ್ ಕಫರೂ ಬಿಲ್ಲಾಹಿ ವ ರಸೂಲಿಹೀ ವ ಮಾತೂ ವಹುಮ್ ಫಾಸಿಖೂನ್.** ಅವರ ಪೈಕಿ ಮೃತಪಟ್ಟ ಯಾರಿಗೂ ನೀನೆಂದಿಗೂ (ಜನಾಝ) ನಮಾಝ್ ಮಾಡಬಾರದು. ಅಂತಹವನ ಗೋರಿಯ ಬಳಿ (ಪ್ರಾರ್ಥಿಸಲಿಕ್ಕೆ) ನೀನು ನಿಲ್ಲಬಾರದು. ಏಕೆಂದರೆ ಅವರು ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ನಂಬದೆ ಧಿಕ್ಕಾರಿಗಳಾಗಿ ಮೃತಪಟ್ಟಿದ್ದಾರೆ. (9:84).

ಇನ್ನು ನಾನು ಕೆಲವು ಮೃತರ ಬಗ್ಗೆ ವಿವರಿಸುವೆನು. ಜುಮುಅದ ನಂತರ ಅವರ ನಮಾಝ್ ಜನಾಝ ಗಾಯಿಬ್ ನಿರ್ವಹಿಸುವೆನು. ಮೊದಲನೆಯ ಜನಾಝ ಕೇರಳದ ಮುಕರ್ರಮ್ ಮೌಲಾನ ಮುಹಮ್ಮದ್ ಉಮರ್ ಸಾಹಿಬರ ಪತ್ನಿ ಮುಕರ್ರಮ ಅಮತುಲ್ ಹಫೀಝ ಸಾಹಿಬ ಅವರದಾಗಿದೆ. ಅವರು ಅಕ್ಟೋಬರ್ 20ರಂದು 72ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು 1947ರಲ್ಲಿ ಕೇರಳದಲ್ಲಿ ಜನಿಸಿದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾಯಿಯ ಕುಟುಂಬದ ಹಿರಿಯಜ್ಜನ ಮೂಲಕ ಪ್ರವೇಶಿಸಿತ್ತು. ಅವರು ಕೇರಳದ ಆರಂಭ ಕಾಲದ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಮೃತರು ಚೆನ್ನೈ ಜಮಾಅತಿನಲ್ಲಿ ಲಜ್‌ನದ ಸೆಕ್ರಿಟರಿ ಮಾಲ್ ಮತ್ತು ಕೇರಳದಲ್ಲಿ ದೀರ್ಘಕಾಲ ಸದರ್ ಲಜ್‌ನ ಆಗಿದ್ದರು. ಪವಿತ್ರ ಖುರ್‌ಆನ್ ಪಾರಾಯಣ ಮತ್ತು ತಹಜ್ಜುದ್ ಬಗ್ಗೆ ಬಹಳ ನಿಷ್ಠೆ ಹೊಂದಿದ್ದರು. ಅವರು ಲಜ್‌ನ ಮತ್ತು ನಾಸಿರಾತ್‌ಗಳಿಗೆ ಪವಿತ್ರ ಖುರ್‌ಆನ್ ಓದಲು ಕಲಿಸುತ್ತಿದ್ದರು. ಎಲ್ಲಾ ಫರ್ಝ್ ಮತ್ತು ನಫ್ಲ್ ಉಪವಾಸಗಳನ್ನು ನಿರ್ವಹಿಸುತ್ತಿದ್ದರು. ಅವರು ತಮ್ಮ ಜೀವಿತದ ಕೊನೆಯ ತನಕ ತನ್ನ ಪತಿ ಮೌಲಾನ ಮುಹಮ್ಮದ್ ಉಮರ್ ಸಾಹಿಬರಿಗೆ ಬಹಳ ಸೇವೆ ಸಲ್ಲಿಸಿದರು. ಅವರು ಅತಿಥಿ ಸತ್ಕಾರ ಪ್ರಿಯೆಯೂ ಬಡವರ ಸೇವೆ ಮಾಡುವವರೂ ಆಗಿದ್ದರು. ಬಹಳ ಸಾತ್ವಿಕ ಮಹಿಳೆಯಾಗಿದ್ದು ಖಿಲಾಫತ್‌ನೊಂದಿಗೆ ಬಹಳ ಗೌರವಭಾವ ಹೊಂದಿದ್ದರು. ಅವರಿಗೆ ಮೂರು ಸಾರಿ ಹಾರ್ಟ್ ಎಟಾಕ್ ಆಗಿತ್ತು. ಮೂರನೆಯ ಸಾರಿ ಹಾರ್ಟ್ ಎಟಾಕ್ ಆದಾಗ ಮೌಲವಿ ಉಮರ್ ಸಾಹಿಬರೊಂದಿಗೆ ಅವರು ಹೇಳಿದರು: ನಾನು ಮೃತಳಾಗುವ ಕಾಲ ಆಸನ್ನವಾಗಿದೆ. ಎಲ್ಲರಿಗೂ ನನ್ನ ಸಲಾಮ್ ತಲಪಿಸಿರಿ. ಅನಂತರ ಉಚ್ಚಧ್ವನಿಯಲ್ಲಿ ಮೂರು ಸಾರಿ ಅಲ್ಲಾಹು ಅಕ್‌ಬರ್ ಎಂದು ಹೇಳಿದರು. ಅನಂತರ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾದರು. ಅವರು ಮೂಸಿ ಆಗಿದ್ದರು. ಅವರು ನಾಲ್ವರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನು ಅವರ ಪ್ರಾರ್ಥನೆಗಳ ವಾರೀಸುದಾರರರನ್ನಾಗಿ ಮಾಡಲಿ.

ಎರಡನೆಯ ಜನಾಝ ಮುಕರ್ರಮ್ ಚೌಧರಿ ಮುಹಮ್ಮದ್ ಇಬ್ರಾಹೀಮ್ ಸಾಹಿಬ್ ಅವರದ್ದಾಗಿದೆ. ಅವರು ಪಾಕಿಸ್ಥಾನದ ಅನ್‌ಸಾರುಲ್ಲಾ ಮಾಸಿಕದ ಮೇನೇಜರ್ ಮತ್ತು ಪಬ್ಲಿಶರ್ ಆಗಿದ್ದರು. ಅಕ್ಟೋಬರ್ ದಿನಾಂಕ 16ರಂದು 83ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. 2003ರಲ್ಲಿ ಒಂದು ಮೊಕದ್ದಮೆಯಲ್ಲಿ ಅವರ ಬಗ್ಗೆ ಸರಕಾರಿ ಪ್ರಕಟಣೆ ಜಾರಿಯಾಗಿತ್ತು. ನಂತರ ಅವರು ನನ್ನ ಅನುಮತಿ ಪಡೆದು ಲಂಡನ್‌ಗೆ ಆಗಮಿಸಿದರು. ಅವರು ಮೂಸಿ ಆಗಿದ್ದರು. ಮೃತರಾಗುವ ಸ್ವಲ್ಪ ಸಮಯದ ಮೊದಲು ರಬ್ವಕ್ಕೆ ಹೋಗಿದ್ದರು. ಅಲ್ಲಿಯೇ ಅವರು ನಿಧನ ಹೊಂದಿದರು. ಅವರು ಒಬ್ಬ ಪುತ್ರಿ, ಐದು ಪುತ್ರರನ್ನು ಮತ್ತು ಅನೇಕ ಮೊಮ್ಮಕ್ಕಳನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅವರ ಮಕ್ಕಳಿಗೆ ಮತ್ತು ಅವರ ಸಂತಾನ ಪರಂಪರೆಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಮತ್ತು ಜಮಾಅತ್ ಹಾಗೂ ಖಿಲಾಫತ್‌ನೊಂದಿಗೆ ಸಂಬಂಧವಿರಿಸುವ ಭಾಗ್ಯ ಲಭಿಸಲಿ.

ಮೂರನೆಯ ಜನಾಝ ಮುಕರ್ರಮ್ ರಾಜಾ ಮಸ್ಊದ್ ಅಹ್ಮದ್ ಸಾಹಿಬ್ (ಮುಕರ್ರಮ್ ರಾಜಾ ಮುಹಮ್ಮದ್ ನವಾಝ್ ಸಾಹಿಬ್ ಪಿಂಡಾ ದಾದನ್ ಖಾನ್ ಅವರ ಪುತ್ರ) ಅವರದಾಗಿದೆ. ಅವರು ದೀರ್ಘಕಾಲ ರೋಗಶಯ್ಯೆಯಲ್ಲಿದ್ದು 69ನೇ ವರ್ಷ ಪ್ರಾಯದಲ್ಲಿ ಅಕ್ಟೋಬರ್ 19ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು 1991ರಲ್ಲಿ ಯು.ಕೆ.ಗೆ ಆಗಮಿಸಿದರು. ಅವರು ಕೇಟ್ ಪೋರ್ಟ್ ಜಮಾಅತಿನ ಪ್ರಥಮ ಸದರ್ ಆಗಿ ನೇಮಿಸಲ್ಪಟ್ಟಿದ್ದರು. ಅವರು ಅನ್ಸಾರುಲ್ಲಾದ ಖಾಯಿದ್ ಉಮೂಮಿ, ಎಡಿಶನ್ ಸೆಕ್ರೆಟರಿ ವಸಾಯಾ, ನೇಶನಲ್ ಸೆಕ್ರೆಟರಿ ವಸಾಯಾ ಆಗಿ ಸೇವೆ ಸಲ್ಲಿಸುವ ಭಾಗ್ಯ ಗಳಿಸಿದರು. ವಸಿಯ್ಯತ್ ವ್ಯವಸ್ಥೆಯನ್ನು ಉತ್ತಮಪಡಿಸಲು ನಾನು ಹೇಳಿದಾಗ ಅವರು ಬಹಳ ಪ್ರಯತ್ನ ಮಾಡಿದರು ಮತ್ತು ಅಲ್ಲಾಹನ ಅನುಗ್ರಹದಿಂದ ಮೂಸಿಗಳ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಿದರು. ಅವರಿಗೆ ಖಿಲಾಫತ್‌ನೊಂದಿಗೆ ಗಾಢವಾದ ಸಂಬಂಧವಿತ್ತು. ಅವರು ಜಮಾಅತಿನ ಹುದ್ದೇದಾರರಿಗೆ ಗೌರವ ನೀಡುತ್ತಿದ್ದರು. ನಮಾಝ್ ಮತ್ತು ತಹಜ್ಜುದ್ ಬಗ್ಗೆ ನಿಷ್ಠೆ ಇತ್ತು. ಚಂದಗಳನ್ನು ಬಹಳ ವಿಶಾಲ ಹೃದಯಿಯಾಗಿ ನೀಡುತ್ತಿದ್ದರು. ದಾನಧರ್ಮ ನೀಡುವವರಾಗಿದ್ದರು. ಬಡವರ ಸೇವೆ ಮಾಡುವವರೂ ಮೃದು ಹೃದಯಿಯೂ ಆಗಿದ್ದರು. ಅವರು ಅಲ್ಲಾಹನ ಅನುಗ್ರಹದಿಂದ ಮೂಸೀ ಆಗಿದ್ದರು. ಅವರು ಪತ್ನಿ, ಒಬ್ಬ ಪುತ್ರಿ ಮತ್ತು ಇಬ್ಬರು ಪುತ್ರರನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ರಹಮತ್ ನೀಡಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ನಾಲ್ಕನೆಯ ಜನಾಝ ಮುಕರ್ರಮ ಸಾಲಿಹ ಅನ್ವರ್ ಅಬೂ ಸಾಹಿಬ ಅವರದಾಗಿದೆ. ಅವರು ಸಿಂಧ್‌ನ ಮರ್ಹೂಂ ಅನ್ವರ್ ಅಲಿ ಅಬೂ ಸಾಹಿಬ್‌ರವರ ಪತ್ನಿಯಾಗಿದ್ದರು. ಅವರು ಅಕ್ಟೋಬರ್ ದಿನಾಂಕ 1ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಬಹಳ ಧೈರ್ಯವಂತೆಯೂ ನಿರ್ಭಯರೂ ಇಬಾದತ್ ಬಗ್ಗೆ ನಿಷ್ಠೆಯುಳ್ಳವರೂ ಹುಖೂಖುಲ್ಲಾಹ್, ಹುಖೂಖುಲ್ ಇಬಾದ್ ಈಡೇರಿಸುವ ಮಹಿಳೆಯಾಗಿದ್ದರು. ಬಾಲ್ಯದಿಂದಲೇ ನಮಾಝ್, ಉಪವಾಸಗಳನ್ನು ಅನುಷ್ಠಿಸುವವರೂ ಚಂದ ನೀಡುವವರೂ ಆಗಿದ್ದರು. ಖಿಲಾಫತ್‌ನೊಂದಿಗೆ ಸತ್ಯವಾದ ದೃಢ ಸಂಬಂಧವಿತ್ತು. ಅವರ ಪುತ್ರಿ ತಾಹಿರ ಮೂಮಿನ್ ಹೇಳುತ್ತಾರೆ: ವಿವಾಹದ ನಂತರ ಅಲ್ಲಾಹನು ಅವರಿಗೆ ಅಸಂಖ್ಯಾತ ಅನುಗ್ರಹ ನೀಡಿದ ಹಾಗೆಯೇ ಅವರಿಗೆ ವಿಶಾಲ ಹೃದಯವನ್ನೂ ನೀಡಿದನು. ಅವರು ಬಡವರಿಗೆ ಸಹಾಯ ಮಾಡುವವರೂ ವಿನಯಾನ್ವಿತೆಯೂ ಆಗಿದ್ದರು. ಚಂದದ ಪ್ರತಿಯೊಂದು ಕೋರಿಕೆಗೆ ಉತ್ತರ ನೀಡುವವರಾಗಿದ್ದರು. ನಮಗೆ ಏನಾದರೂ ಕಷ್ಟ ಸಂಭವಿಸಿದರೆ ನಾವು ಅವರೊಂದಿಗೆ ಹೇಳುತ್ತಿದ್ದೆವು. ಅವರು ನಮ್ಮೊಂದಿಗೆ ನಮಾಝ್ ಮಾಡಿ ಪ್ರಾರ್ಥಿಸಲು ಹೇಳುತ್ತಿದ್ದರು. ಅನಂತರ ಅವರು ಸಹ ನಮಗೋಸ್ಕರ ಬಹಳ ಪ್ರಾರ್ಥನೆ ಮಾಡುತ್ತಿದ್ದರು. ಅಲ್ಲಾಹನು ಅವರ ಮಕ್ಕಳಲ್ಲಿಯೂ ಜಮಾಅತಿನ ಬಗ್ಗೆ ನಿಷ್ಠೆಯನ್ನು ವರ್ಧಿಸಲಿ. ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅವರು ಜಮಾಅತ್‌ನೊಂದಿಗೆ ನಿಷ್ಠೆ ಹೊಂದಿ ತ್ಯಾಗಗಳನ್ನು ಮಾಡುತ್ತಿದ್ದ ಹಾಗೆ ಅವರ ಮಕ್ಕಳು ಸಹ ಖಿಲಾಫತ್ ಮತ್ತು ಜಮಾಅತ್‌ನೊಂದಿಗೆ ನಿಷ್ಠೆಯನ್ನು ಹೊಂದಿ ತ್ಯಾಗಗಳನ್ನು ಮಾಡುವವರಾಗಲಿ. ಅವರು ತಮ್ಮ ಮಕ್ಕಳಿಗೋಸ್ಕರ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸುವವನಾಗಲಿ. ಅವರಿಗೆ ಇಬ್ಬರು ಪುತ್ರರೂ ಇಬ್ಬರು ಪುತ್ರಿಯರೂ ಇದ್ದಾರೆ.

*****

الحمد لله نحمده و نستعينه و نستغفره ونؤمن به ونتوكل
عليه ونعوذ بالله من شرور انفسنا و من سيئات اعمالنا من
يهده الله فلا مضل له ومن يضلله فلا هادي له - ونشهد ان لا
اله الا الله ونشهد ان محمدا عبده ورسوله - عباد الله رحمكم
الله ان الله يامر بالعدل و الاحسان و ايتاء ذي القربى و ينهى
عن الفحشاء و المنكر و البغي يعظكم لعلكم تذكرون
اذكروا الله يذكركم و ادعوه يستجب لكم ولذكر الله اكبر -

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 15-11-2019*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon